ಹೇಳುತ್ತಿದ್ದಾರೆ, ಅದರ ಪ್ರಪೋಸಲ್ ಬಂದರೆ ಸರ್ಕಾರ ಮಾಡಿಕೊಡುವಂತಹ ಪ್ರಯತ್ನವನ್ನು ಮಾಡುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ತಾವು ಈ ವರ್ಷ ಮಾಡುತ್ತೀರೋ, ಅಥವಾ ಮುಂದಿನ ವರ್ಷ ಮಾಡುತ್ತಿರೋ? ನಾನು ಈ ವರ್ಷವೇ ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಬಾಬುರಾವ್ ಚಿವ್ವಾಣ್: ಮಾನ್ಯ ಅಧ್ಯಕ್ಷರೇ, ಇದರ ಬೇಡಿಕೆ ಬಂದ ನಂತರ ಮಾಡುತ್ತೇನೆ.

ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕಾರ್ಯದಲ್ಲಿ ಕರ್ತವ್ಯಲೋಪ.

207(2253)

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಎಸ್.ಎಸ್.ಎಲ್.ಸಿ. ಮೌಲ್ಯ ಮಾಪನ ಕಾರ್ಯದಲ್ಲಿ ಕರ್ತವ್ಯ ಲೋಪ ಕಂಡು ಬಂದಿದೆಯೆ?

ಆ) ಕಂಡುಬಂದಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಈ ಕುರಿತು ಸರ್ಕಾರ ತನಿಖೆಗೆ ಆದೇಶ ಹೊರಡಿಸಿದೆಯೆ?

ಈ) ಈ ಕುರಿತು ಸರ್ಕಾರ ತನಿಖೆಗೆ ಆದೇಶ ಹೊರಡಿಸಿದೆಯೆ?

ಉ) ಪ್ರಶ್ನೆ ಪತ್ರಿಕೆ ಬಹಿರಂಗ ಇತ್ಯಾದಿಗಳಲ್ಲಿ ಯಾರನ್ನು ಹೊಣೆಗಾರರನ್ನಾಗಿ ಗುರುತಿಸಲಾಗಿದೆ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಮೌಲ್ಯಮಾಪನದಲ್ಲಿ ಕರ್ತವ್ಯ ಲೋಪಕ್ಕೆ ಕಾರಣರಾದವರ ವಿರುದ್ಧ, ಲೋಪದೋಷದ ಗಂಭೀರತೆಯನ್ನು ಆಧರಿಸಿ ನಿಯಮಗಳನ್ವಯ ಕ್ರಮ ಜರುಗಿಸಲಾಗಿದೆ.

ಇ) ಹೌದು.

ಈ ಮತ್ತು ಉ) ಪ್ರಶ್ನೆ ಪತ್ರಿಕೆ ಬಯಲಾಗಿರುವ ಬಗೆಗೆ ಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ಒಳಪಡಿಸಲಾಗಿದೆ. ಹಾಗೂ ಈ ರೀತಿಯ ಗೊಂದಲವನ್ನು ಶಾಶ್ವತವಾಗಿ ತಪ್ಪಿಸಲು ಹಾಗೂ ಪರೀಕ್ಷಾ ಪದ್ಧತಿಯ ಲೋಪದೋಷಗಳನ್ನು ತಡೆಗಟ್ಟಲು ಹಾಗೂ ಪರೀಕ್ಷಾ ಪದ್ಧತಿಯನ್ನು ಸುಧಾರಿಸುವ ಸಲುವಾಗಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ನಾನು ಕೇಳುವುದೇನೆಂದರೆ, ಇದು ಇಲಾಖೆಯ ನಿರ್ಲಕ್ಷವೋ, ಲೋಪದೋಷವೋ ಏನೋ ಗೊತ್ತಿಲ್ಲ. ಇದು ರಾಜ್ಯದ ಆರೂವರೆ ಲಕ್ಷ ಎಸ್.ಎಸ್.ಎಲ್.ಸಿ. ಕಲಿಯುವಂತಹ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗುವಂತಹ ರೀತಿಯಲ್ಲಿ ಆಗಿದೆ. ಇದಕ್ಕೆ ಕಾರಣವೇನು? ಮೌಲ್ಯ ಮಾಪನದಲ್ಲಿ ವಿಳಂಬವಾಗಿರುವಂಥಾದ್ದು, ನಿರ್ಲಕ್ಷ್ಯದ ಕಾರಣದಿಂದ ಆಗಿದೆ. ಇದರ ಬಗ್ಗೆ ನಾನು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ಇನ್ನು ಎರಡನೆಯದಾಗಿ ಈ ರೀತಿಯಾಗಿರುವುದಕ್ಕೆ ತಾವು ಎಷ್ಟು ಮಂದಿಯ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೇ, ಕಳೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಾಗೂ ಮೌಲ್ಯಮಾಪನದಲ್ಲಿ ಕೆಲವು ತೊಂದರೆಗಳಾಗಿರುವಂಥಾದ್ದು ನಿಜವಾಗಿದೆ. ಕಳೆದ ಮಾರ್ಚ್ ತಿಂಗಳಿನಲ್ಲಿ ನಡೆದಂತಹ ಪರೀಕ್ಷೆಯಲ್ಲಿ ಕೆಲವು ಲೋಪದೋಷಗಳು ಆಗಿರುವಂಥಾದ್ದು, ಅದೆಲ್ಲವನ್ನೂ ನಾವು ಸರಿಮಾಡಬೇಕೆಂದು ಸಪ್ಲಿಮೆಂಟರಿ ಪರೀಕ್ಷೆಯನ್ನು ಮಾಡಿದೆವು. ಆ ರೀತಿ ಮಾಡಿದಂತಹ ಸಂದರ್ಭದಲ್ಲಿ ಆ ಲೋಪದೋಷಗಳನ್ನು ಸರಿಮಾಡಿಕೊಂಡು ಯಾವುದೇ ತೊಂದರೆ ಇಲ್ಲದೆ ಸುಮಾರು ಎರಡು ಲಕ್ಷ ಐದು ಸಾವಿರ ಜನ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಸೆಪ್ಲಿಮೆಂಟರಿ ಪರೀಕ್ಷೆಯನ್ನು ಮಾಡಿದೆವು. ಈ ಎಲ್ಲಾ ಲೋಪದೋಷಗಳನ್ನು ಸರಿಮಾಡುವುದಕ್ಕೆ ನಾವು ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಕಳೆದ ಮಾರ್ಚ್ ತಿಂಗಳಿನಲ್ಲಿ ಆದಂತಹ ತೊಂದರೆಗಳಿಗೆ ಕಾರಣವಾದಂತಹ ಜನರ ಮೇಲೆ ವಿಸ್ತಿನ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಾವು 6 ಜನ ಅಸಿಸ್ಟೆಂಟ್ ಡೈರಕ್ಟರ್‌ಗಳನ್ನು ಅಲ್ಲಿಂದ ಶಿಫ್ಟ್ ಮಾಡಿದ್ದೇವೆ, ಮತ್ತೆ ಕೆಲವು ಜನ ಪರೀಕ್ಷಾ ಮೇಲ್ವಿಚಾರಕರು ಯಾರಿದ್ದರು, ಅವರ ಮೇಲೂ ಕ್ರಮ ತೆಗೆದುಕೊಂಡಿದ್ದೇವೆ, ಮತ್ತೆ ಐದು ಸಾವಿರ ರೂಪಾಯಿಗಳ ದಂಡವನ್ನು ವಿಧಿಸಿದ್ದೇವೆ. ಮತ್ತೆ ಖಾಸಗಿ ಶಾಲೆಯಿಂದ ಮೌಲ್ಯಮಾಪನಕ್ಕೆ ಬಂದಂತಹ ಸಂದರ್ಭದಲ್ಲಿ ಆ ಪಟ್ಟಿಯನ್ನು ಕವರ್‌ನಲ್ಲೇ ಉದಾಸೀನವಾಗಿ ಹಾಕಿ ಹೋಗಿರುವಂತಹ ಕಾರಣಗಳು ಇವೆ. ಕೆಲವರನ್ನು ಸಸ್ಪೆಂಡ್ ಮಾಡಿದ್ದೇವೆ, ಇದರಿಂದ ಸರ್ಕಾರದ ಮನಸ್ಸಿಗೂ ನೋವಾಗಿದೆ. ಆದುದರಿಂದ ಇನ್ನು

ಅಮೂಲಾಗ್ರವಾಗಿ ಬದಲಾವಣೆಯನ್ನು ಮಾಡಿ ಮುಂದಿನ ದಿವಸಗಳಲ್ಲಿ ಇದನ್ನು ಸರಿ ಮಾಡುತ್ತೇವೆ. ಈಗಾಗಲೇ ಸಪ್ಲಿಮೆಂಟರಿ ಪರೀಕ್ಷೆಯನ್ನು ಮಾಡಿದ್ದೇವೆ, ನಾನು ಇಷ್ಟು ವಿಷಯಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ಇನ್ನು ನನ್ನ ಎರಡನೆಯ ಪ್ರಶ್ನೆ ಏನೆಂದರೆ, ಪ್ರಶ್ನೆ ಪತ್ರಿಕೆಗಳು ಬಹಿರಂಗವಾದದ್ದರ ಬಗ್ಗೆ ತಾವು ಇದನ್ನು ಸಿ.ಒ.ಡಿ. ತನಿಖೆಗೆ ಕೊಟ್ಟಿದ್ದೀರೆಂಬ ವಿಚಾರವಿದೆ. ಇದರ ಬಗ್ಗೆ ವರದಿ ಬಂದಿದೆಯಾ? ತುಮಕೂರು ಮತ್ತು ಬೆಂಗಳೂರ್‌ನಲ್ಲಿ ಬೇರೆ ಬೇರೆ ಹಿಂದಿ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟಿರುವಂಥಾದ್ದು ನನ್ನ ಗಮನಕ್ಕೆ ಬಂದಿದೆ. ಹೀಗೆ ಬಹಿರಂಗವಾಗಿರುವಂಥಾದ್ದರ ಬಗ್ಗೆ ತಾವು ಡಿಫೆಂಡ್ ಮಾಡುವುದು ಏಕೆ? ಇನ್ನು ಮುಂದೆ ಇದು ಆಗದ ರೀತಿಯಲ್ಲಿ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಎರಡನೆಯದಾಗಿ ಮುಂದಿನ ಮಾರ್ಚ್ ತಿಂಗಳಲ್ಲಿ ಪರೀಕ್ಷಾ ಸಂದರ್ಭದಲ್ಲಿ ಇಂತಹ ಲೋಪದೋಷಗಳು ಆಗದ ಹಾಗೆ ಯಾವ ರೀತಿಯಲ್ಲಿ ಕಟ್ಟೆಚ್ಚರವನ್ನು ತೆಗೆದುಕೊಳ್ಳುತ್ತೀರೆಂಬುದನ್ನು ತಾವು ಹೇಳಬೇಕು, ಮತ್ತೆ ಜನತೆಗೆ ಯಾವ ರೀತಿಯಲ್ಲಿ ಸಂದೇಶವನ್ನು ಕೊಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಪತ್ರಿಕೆ ಬಯಲಾಗಿರಲಿಲ್ಲ, ಆದರೆ ಕೆಲವು ಹೇಳಿಕೆಗಳು, ಅನುಮಾನಗಳಿಂದ ಇದನ್ನು ಸಿ.ಒ.ಡಿ. ಯವರಿಗೆ ಕೊಟ್ಟಿದ್ದೆವು. ನಾನು ಈ ವಿಷಯವಾಗಿ ಹೇಳಬೇಕೆಂದರೆ, ಶ್ರೀ ರಾಮನು ಸೀತೆ ಮಾಡದ ತಪ್ಪಿಗೆ ಅಗ್ನಿ ಪ್ರವೇಶ ಮಾಡುವುದಕ್ಕೆ ಹೇಳಿದ, ಆ ರೀತಿಯಲ್ಲಿ ಆ ಅಲ್ಪನ ಮಾತು ಏನು ಯಾರು ಎಂದು ಆಗಿತ್ತು. ಶ್ರೀರಾಮಚಂದ್ರ ಮಾಡಿದ ರೀತಿಯಲ್ಲೇ ಏನಾದರೂ ಆಗಿದೆಯೇ ಎಂಬುದನ್ನು ನಾವು ಕನ್‌ಫರ್ಮ್ ಮಾಡಿಕೊಳ್ಳಬೇಕೆಂದು ಇದನ್ನು ಸಿ.ಒ.ಡಿ.ಯವರಿಗೆ ಕೊಟ್ಟಿದ್ದೆವು.

ಹುಲ್‌ಸೂರಿನಲ್ಲಿ ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಗಳ ಕಟ್ಟಡ.

208(1957)

ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರಿನಲ್ಲಿ ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಯ ಕಟ್ಟಡವನ್ನು ಜಿಲ್ಲಾ ಪಂಚಾಯ್ತಿಯವರಿಂದ ಆರೋಗ್ಯ ಇಲಾಖೆಗೆ ತೆಗೆದುಕೊಳ್ಳಲಾಗಿದೆಯೆ?